Srinivas Institute of Technology
Library, Mangalore

CBCS SCHEME

USN | | | | | | | | | | |

17KKM39/49

**Question Paper Version : A**

# Third/Fourth Semester B.E. Degree Examination, July/August 2021

# ಕನ್ನಡ ಮನಸು

## (COMMON TO ALL BRANCHES)

Time: 2 hrs.] [Max. Marks: 30

### ಸೂಚನೆಗಳು

1. ಎಲ್ಲ ೩೦ ಪ್ರಶ್ನೆಗಳಿಗೂ ಉತ್ತರಿಸಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ.
2. ಓ.ಎಂ.ಆರ್ ಉತ್ತರ ಪತ್ರಿಕೆಯಲ್ಲಿ ಯು.ಎಸ್.ಎನ್ ಸಂಖ್ಯೆ ಹಾಗೂ ಪಶ್ನೆ ಪತ್ರಿಕೆಯ ಶ್ರೇಣಿಯನ್ನು ಅಂದರೆ A, B, C ಅಥವಾ D ಯನ್ನು ತಪ್ಪಿಲ್ಲದಂತೆ ಕಡ್ಡಾಯವಾಗಿ ಗುರುತಿಸುವುದು ಅಭ್ಯರ್ಥಿಯ ಜವಾಬ್ದಾರಿಯಾಗಿರುತ್ತದೆ.
3. ಓ.ಎಂ.ಆರ್ ಉತ್ತರ ಪತ್ರಿಕೆಯಲ್ಲಿ ನಿಗದಿಪಡಿಸಿರುವ ಸ್ಥಳದಲ್ಲಿ ಭರ್ತಿಮಾಡದೆ ಹಾಗೆಯೇ ಬಿಟ್ಟಲ್ಲಿ ಅಥವಾ ಭರ್ತಿಮಾಡಿದ ಮಾಹಿತಿಯಲ್ಲಿ ಯಾವುದೇ ವ್ಯತ್ಯಾಸವಿದ್ದಲ್ಲಿ ಅಂತಹ ಉತ್ತರ ಪತ್ರಿಕೆಗಳನ್ನು ರದ್ದು ಪಡಿಸಲಾಗುವುದು.
4. ಕೇವಲ ಒಂದು ಉತ್ತರವನ್ನು ಮಾತ್ರ ಉತ್ತರ ಪತ್ರಿಕೆಯಲ್ಲಿ ಗುರುತಿಸತಕ್ಕದ್ದು. ಒಂದೆ ಪ್ರಶ್ನೆಗೆ ಎರಡು ಉತ್ತರವನ್ನು ಗುರುತಿಸುವುದು ಅಮಾನ್ಯ.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾದ ಓ.ಎಂ.ಆರ್ ಉತ್ತರ ಪತ್ರಿಕೆಯ ಹಾಳೆಯ ಮೇಲೆ ಕಪ್ಪು ಅಥವಾ ನೀಲಿ ಶಾಹಿಯ ಬಾಲ್‌ಪಾಯಿಂಟ್ ಪೆನ್ನಿನಿಂದ ಗುರುತು ಮಾಡಬೇಕು.

---

1. ಸರ್ಕಾರದ ಯಾವುದೇ ನಿರ್ಣಯ, ಆದೇಶ, ಸೂಚನೆ, ಘೋಷಣೆ, ವಿವರಣೆ ವಿಶ್ಲೇಷಣೆ ಇವುಗಳಿಗೆ ವ್ಯಾಪಕ ಪ್ರಚಾರ ಅಗತ್ಯವೆನಿಸಿದಾಗ ಯಾವ ವಿಧವನ್ನು ಅನುಸರಿಸಲಾಗುತ್ತದೆ.
   ಅ) ಸುತ್ತೋಲೆ  ಬ) ಪ್ರಕಟಣೆ  ಕ) ಮೆಮೋ  ಡ) ಅರ್ಜಿ.
2. ಕನ್ನಡ ಭಾಷೆ ಯಾವ ಭಾಷಾ ವರ್ಗಕ್ಕೆ ಸೇರಿದೆ?
   ಅ) ಸೆಮೆಟಿಕ್  ಬ) ಇಂಡೋ ಆರ್ಯನ್  ಕ) ತುರೇನಿಯನ್  ಡ) ದ್ರಾವಿಡ.
3. 'ನೋವು' ಪದದ ವಿರುದ್ಧಾರ್ಥಕ ಪದ ಗುರ್ತಿಸಿ
   ಅ) ದು:ಖ  ಬ) ಕಷ್ಟ  ಕ) ನಲಿವು  ಡ) ನಿವಾರಣೆ
4. 'ನೆತ್ತರು' ಪದದ ಸಮನಾರ್ಥಕ ಪದ ಗುರ್ತಿಸಿ
   ಅ) ರಕ್ತ  ಬ) ನೆತ್ತಿ  ಕ) ಬಿಸಿಲು  ಡ) ನೀರು
5. 'ಮಸಿ ಬಳಿದ' ಈ ನುಡಿಗಟ್ಟಿನ ಸರಿಯಾದ ಅರ್ಥ ಗುರ್ತಿಸಿ
   ಅ) ಮುಖಕ್ಕೆ ಮಸಿ ಬಳಿಯುವುದು  ಬ) ಚಿತ್ರದ ಅಂದ ಕೆಡಿಸುವುದು
   ಕ) ಕೆಟ್ಟ ಹೆಸರು ತರುವುದು  ಡ) ಯಾವುದೂ ಅಲ್ಲ.

6. 'ಮುಖ' ಇದರ ತದ್ಭವ ರೂಪ ಗುರ್ತಿಸಿ

ಅ) ಮುಕ ಬ) ಮೊಗ ಕ) ಮೊಖ ಡ) ಮೊಕ

7. 'ಬೆಳೆಯನ್ನು' ಇದು ಯಾವ ಸಂಧಿ ಗುರ್ತಿಸಿ

ಅ) ಆಗಮ ಸಂಧಿ ಬ) ಲೋಪಸಂಧಿ ಕ) ವೃದ್ಧಿ ಸಂಧಿ ಡ) ಆದೇಶ ಸಂಧಿ

8. 'ತುತ್ತ ತುದಿ' ಇದು ಒಂದು ----------

ಅ) ದ್ವಿರುಕ್ತಿ ಬ) ಅನುಕರಣಾವ್ಯಯ ಕ) ಜೋಡು ನುಡಿ ಡ) ಸಮಾಸ

9. [" "] ಈ ಆವರಣದ ಒಳಗಡೆ ಇರುವ ಚಿಹ್ನೆ ಯಾವುದು?

ಅ) ಭಾವ ಸೂಚಕ ಬ) ಅರ್ಧ ವಿರಾಮ ಕ) ಉದ್ಧರಣ ಡ) ವಿವರಣಾತ್ಮಕ.

10. [!] ಈ ಆವರಣದ ಒಳಗಡೆ ಇರುವ ಚಿಹ್ನೆ ಯಾವುದು?

ಅ) ಪ್ರಶ್ನಾರ್ಥಕ ಬ) ಭಾವಸೂಚಕ ಕ) ವಿವರಾಣಾತ್ಮಕ ಡ) ಅಲ್ಪವಿರಾಮ

11. 'ಶ್ರಾವಣ' ಕವನವನ್ನು ಯಾವ ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ

ಅ) ಹಾಡು ಪಾಡು ಬ) ಸಖಿಗೀತ ಕ) ಗರಿ ಡ) ನಾದಲೀಲ .

12. ಡಾ. ವಿಶ್ವೇಶ್ವರಯ್ಯನವರು ಭದ್ರಾವತಿ ಕಾರ್ಖಾನೆಯ 'ಬ್ಲಾಸ್ಟ್ ಫರ್ನೇಸಿನ' ವಿಭಾಗದಲ್ಲಿ ವಿದೇಶಿಯೊಬ್ಬನು ನಿವೃತ್ತಿಯಾದ ಮೇಲೆ ಆ ಜಾಗಕ್ಕೆ ಯಾವ ಊರಿನ ವ್ಯಕ್ತಿಯನ್ನು ನಿಯೋಜಿಸಿದರು?

ಅ) ಬೆಂಗಳೂರು ಬ) ಮೈಸೂರು ಕ) ಚಿಕ್ಕಬಳ್ಳಾಪುರ ಡ) ಶಿವಮೊಗ್ಗ

13. ಡಾ. ವಿಶ್ವೇಶ್ವರಯ್ಯನವರು ದಿವಾನಗಿರಿಯನ್ನು ಒಪ್ಪಿಕೊಳ್ಳಲು ತನ್ನ ತಾಯಿ/ಸೋದರ ಮಾವನಿಗೆ ವಿಧಿಸಿದ ಷರತ್ತು ಏನು?

ಅ) ನನ್ನ ಕೆಲಸಕ್ಕೆ ಅಡ್ಡಿಪಡಿಸಬಾರದು

ಬ) ಸರ್ಕಾರಿ ಸವಲತ್ತುಗಳನ್ನು ದುರುಪಯೋಗ ಪಡಿಸಲು ಒತ್ತಾಯಿಸುವುದು.

ಕ) ನಮ್ಮ ಬಂಧುಗಳಲ್ಲಿ ಯಾರೊಬ್ಬರಿಗಾದರು ಸರ್ಕಾರಿ ನೌಕರಿಗಾಗಿ ಶಿಫಾರಸ್ಸು ಮಾಡಬಾರದು.

ಡ) ಯಾವುದು ಅಲ್ಲ

14. 'ದೋಣಿ ಹರಿಗೋಲುಗಳಲ್ಲಿ' ಇದರ ಲೇಖಕರು ಯಾರು?

ಅ) ಪೂರ್ಣ ಚಂದ್ರ ತೇಜಸ್ವಿ ಬ) ದ.ರಾ. ಬೇಂದ್ರೆ ಕ) ಶಿವರಾಮ ಕಾರಂತ ಡ) ಕುವೆಂಪು

15. 'ದೋಣಿ ಹರಿಗೋಲುಗಳಲ್ಲಿ' ಲೇಖನವು ---------- ದಂತಿದೆ.

ಅ) ವಿನೋದ ಕಥನ ಬ) ಪ್ರವಾಸ ಕಥನ ಕ) ಪ್ರಬಂಧ ಡ) ಹಾಸ್ಯಮಯ ಕಥನ



VTU-13-09-2021 08:51:45am SN - SN - SN
13-09-2021 09:14:50am SN - SN - SN

Srinivas Institute of Technolo
Library, Mangalore



16. ಅಣ್ಣಪ್ಪನ ರೇಷ್ಮೇ ಕಾಯಿಲೆಯ ಕಥೆಯಲ್ಲಿ ಬರುವ ಒಡಹುಳ ಮನುಷ್ಯನ ಯಾವ ಭಾಗಕ್ಕೆ ನುಗ್ಗಿತು.
ಅ) ಮೂಗು ಬ) ಕಣ್ಣು ಕ) ಬಾಯಿ ಡ) ಕಿವಿ

17. ಅಣ್ಣಪ್ಪನಿಗೆ ಕಾಯಿಲೆ ಜೋರಾಗಿದೆ ಉಳಿಯುವಂತಿಲ್ಲ ಎಂದವನು ಯಾರು?
ಅ) ಚಿಕ್ಕಹುಡುಗ ಬ) ಮಾಯ ಕ) ಗಿ ಡ) ತೂರ

18. ಮಹಾತ್ಮಗಾಂಧಿಯವರ ಪ್ರಕಾರ ಎಮ್ಮೆ -----------.
ಅ) ಗೋ ಜಾತಿಗೆ ಸೇರಿದ ಪ್ರಾಣಿ ಬ) ಕಾಡು ಪ್ರಾಣಿ
ಕ) ಗೋ ಜಾತಿಗೆ ಸೇರಿದ ಪ್ರಾಣಿಯಲ್ಲ ಡ) ಆನೆ ಜಾತಿಗೆ ಸೇರಿದ ಪ್ರಾಣಿ

19. ಆಹಾರ ನಿಪುಣರ ಸಲಹೆ ಪ್ರಕಾರ ಪ್ರತಿಯೊಬ್ಬರು, ಪ್ರತಿದಿನ ಕನಿಷ್ಠ ಎಷ್ಟು ಔನ್ಸ್ ಹಾಲು ಕುಡಿಯಬೇಕು?
ಅ) 07 ಬ) 08 ಕ) 09 ಡ) 10

20. ವರದರಾಜ ಹತ್ತು ಸಲ ಎಣಿಸಿ ಎಷ್ಟು ಹುಡುಗಿಯರು ನಾಪತ್ತೆ ಎಂದ?
ಅ) 05 ಬ) 06 ಕ) 07 ಡ) 08

21. ನಾಪತ್ತೆಯಾಗಿದ್ದ ಹುಡುಗಿಯರು ಯಾವುದರ ಒಳಗೆ ಬಿದ್ದಿದ್ದರು.
ಅ)ಕಾಲುವೆ ಬ) ನದಿ ಕ) ಆನೆಹಳ್ಳ ಡ) ಕೊಳ

22. ನನ್ನ ಜೀವನದಲ್ಲಿ ಭೋಗಕ್ಕಿಂತಲೂ, ತ್ಯಾಗಕ್ಕೆ ಶ್ರೇಷ್ಠ ಸ್ಥಾನ ಕೊಡುತ್ತೇನೆ. ಈ ಮಾತನ್ನು ಯಾವ ಬೆಡ್ ಹೇಳಿತು.
ಅ) 04 ಬ) 05 ಕ) 06 ಡ) 07

23. ಲೇಖಕಿ ತ್ರಿವೇಣಿಯವರ ಮೂಲ ಹೆಸರೇನು?
ಅ) ಭಾಗೀರಥಿ ಬ) ಜಾನಕಿ ಕ) ಉಮಾ ಡ) ಗೀತಾ

24. 'ರೊಟ್ಟಿ ಮತ್ತು ಕೋವಿ' ಕವನವು ಯಾವುದರ ಕುರಿತು ಚಿತ್ರಿಸುತ್ತದೆ.
ಅ) ರೊಟ್ಟಿಯ ಕಥೆಯ ಕುರಿತು ಬ) ಆಯುಧದ ಬಗ್ಗೆ
ಕ) ಹಸಿವಿನ ಭೀಕರತೆ ಕುರಿತು ಡ) ಸ್ವಂತಿಕೆಯ ಬಗ್ಗೆ

25. 'ನಮಗೊಬ್ಬ ಪಾಪು ಬರ್ತಾನೆ' ಅವನಿಗೆ ನಮ್ಮ ಮನೆಯೇ ಇಷ್ಟ. ಈ ಸಾಲುಗಳೂ ಇರುವ ಲೇಖನ ಯಾವುದು.
ಅ) ಗುಬ್ಬಚ್ಚಿಯ ಗೂಡು ಬ) ಬೆಂಕ್ರ ಮೇಸ್ತ್ರಿ ಮತ್ತು ಅರಿಸ್ಟಾಟಲ್
ಕ) ಬೆಡ್ ನಂಬರ ಏಳು ಡ) ಗಾಂಧಿ

VTU-13-09-2021 08:51:45am - SN - SN - SN
13-09-2021 09:11:50am - SN - SN - SN

26. ಬೆಂಕ್ರ ಮೇಸ್ತ್ರೀ ಮೀನು ಹಿಡಿಯಲು ಯಾವ ಬುಟ್ಟಿ ಉಪಯೋಗಿಸುತ್ತಿದ್ದ?
    ಅ) ಏಲಕ್ಕಿ ಕೋಯ್ಲಿನ ಬುಟ್ಟಿ    ಬ) ಕಾಳು ತುಂಬುವ ಬುಟ್ಟಿ
    ಕ) ಕಾಫಿ ಕುಯ್ಲಿನ ಬುಟ್ಟಿ    ಡ) ಮೀನು ಬುಟ್ಟಿ

27. ಅರಿಸ್ಟಾಟಲ್ ರವರು ಯಾರ ಶಿಷ್ಯ?
    ಅ) ಸಾಕ್ರೇಟಿಸ್    ಬ) ಪ್ಲೇಟೋ    ಕ) ಹೆರಡೋಟಸ್    ಡ) ಪೈತಾಗರೊಸ್

28. ಗಾಂಧಿಗೆ ಯಾವ ಕಾಯಿಲೆ ಇದೆ ಎಂದು ಡಾಕ್ಟರ್ ಅವರ ತಾತನಿಗೆ ಹೇಳಿದರು.
    ಅ) ಹೃದಯ ಹಾಗು ಮೂತ್ರಪಿಂಡ    ಬ) ಕರಳು ಬೇನೆ    ಕ) ಕ್ಯಾನ್ಸರ್    ಡ) ಕ್ಷಯ

29. 'ಬೆಲ್ಚಿಯ ಹಾಡು' ಕವನದ ಲೇಖಕರು ಯಾರು?
    ಅ) ಸು.ರಂ. ಎಕ್ಕುಂಡಿ    ಬ) ಎಸ್. ಸುಂದರ್
    ಕ) ಸಿದ್ದಲಿಂಗಯ್ಯ    ಡ) ಸವಿತಾ ನಾಗಭೂಷಣ್

30. ಕನ್ನಡಕ್ಕೆ ನಿಘಂಟನ್ನು ರಚಿಸಿದ ಕಿಟ್ಟಲ್ ----------ದೇಶದವನು.
    ಅ) ಜರ್ಮನಿ    ಬ) ಪೋರ್ಚುಗೀಸ್    ಕ) ಇಂಗ್ಲೇಂಡ್    ಡ) ಅಮೇರಿಕ .

* * * * *

SN - SN - SN 13-09-2021 09:11:50am VTU-13-09-2021 08:51:45am